**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನಾ ಪತ್ರಕ್ಕೆ ಉತ್ತರಿಸುವ ಕುರಿತು.**

**ಪ್ರಶ್ನೆ**

ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಶೈಕ್ಷಣಿಕ ಗುಣಮಟ್ಟ ಸುಧಾರಿಸಲು ಅನೇಕ ಬದಲಾವಣೆಗಳು ಆಗಬೇಕಾಗಿರುವುದು ಸರಿಯಷ್ಟೇ. ಪ್ರಸ್ತುತ ಪರಿಸ್ಥಿತಿಯಲ್ಲಿ 12 ವರ್ಷಗಳ ಕಾಲ ವಿದ್ಯಾರ್ಥಿಗಳ ಕಲಿಕೆ ಬಹುತೇಕ ಯಾವುದೇ ಸಮಾಧಾನ ನೀಡದಿರುವುದು ಇಂತಹ ಪರಿಸ್ಥಿತಿಗೆ ಹೊಣೆ ಯಾರು ಎಂಬ ಪ್ರಶ್ನೆ ನಾವೆಲ್ಲರೂ ಚಿಂತಿಸುವ ಸಮಯ. ಹತ್ತನೇ ತರಗತಿಯಲ್ಲಿ ವಿದ್ಯಾರ್ಥಿಗಳ ಕಲಿಕಾ ಮಟ್ಟ ನೋಡಿದರೆ ನಮ್ಮ ರಾಜ್ಯದ ಶಿಕ್ಷಣ ಎತ್ತ ಸಾಗುತ್ತಿದೆ ಎಂಬ ಪ್ರಶ್ನೆ ಕಾಡುತ್ತಿದೆ. ಇದರ ಹೊಣೆಗಾರಿಕೆ ಶಿಕ್ಷಕರ ಮೇಲೆ ಹಾಕುತ್ತಿರುವುದು ನ್ಯಾಯವೇ? ಎಂಬ ಪ್ರಶ್ನೆ ಎದುರಾಗಿದ್ದು, ಶಿಕ್ಷಕರಿಗೆ ಶಿಕ್ಷೆ ನೀಡಿದರೆ ವಿದ್ಯಾರ್ಥಿಗಳ ಕಲಿಕೆ ಸರಿಯಾಗುವುದಿಲ್ಲ. ಇಲ್ಲವಾದರೆ ಶಿಕ್ಷಣದ ಗುಣಮಟ್ಟ ಎಲ್ಲಿಂದ, ಹೇಗೆ ಸರಿ ಪಡಿಸುವುದು ಎಂಬ ಚಿಂತನೆ ನಡೆಸಿ ಪರಿಹಾರ ಹುಡುಕಬೇಕಿದೆ. ನಮ್ಮ ರಾಜ್ಯದ ಶಾಲಾ ಶಿಕ್ಷಣ ಸುಭದ್ರಗೊಳಿಸಲು, ಗುಣಮಟ್ಟ ಹೆಚ್ಚಿಸಲು ಇತರೆ ಪಠ್ಯಕ್ರಮ ಮಧ್ಯೆ ಕನಿಷ್ಠ ರಾಜ್ಯ ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ಸಮಾನ ನ್ಯಾಯ ಕಲ್ಪಿಸಿಕೊಡಲು ನೆರೆ ರಾಜ್ಯದ ಸಮಾನ ನಮ್ಮ ಮಕ್ಕಳ ಗುಣಮಟ್ಟ ಕಾದಿರಿಸಲು ಮುಂದಾಗಬೇಕಿದೆ. ಮಕ್ಕಳ ಗುಣಮಟ್ಟ ಶಿಕ್ಷಣ ಪೂರ್ವ ಪ್ರಾಥಮಿಕ ಹಂತದಿಂದಲೇ ಪ್ರಾರಂಭ ಆಗಬೇಕಾಗಿರುವುದು. ಅದು ಇಲ್ಲದೇ ಹೋಗಿರುವುದು ಮೂಲ ಕಾರಣವಾಗಿ, ಪೂರ್ವ ಪ್ರಾಥಮಿಕ ಹಂತದಿಂದ ಐದನೇ ತರಗತಿವರೆಗೂ ಪಠ್ಯ ಪುಸ್ತಕ ಇತರೆ ಪಠ್ಯಕ್ರಮಕ್ಕೆ ಹೋಲಿಸಿದರೆ, ಸರಿತೂಗದೇ ಇರುವುದು ನಮ್ಮ ರಾಜ್ಯದ ರಾಜ್ಯ ಪಠ್ಯಕ್ರಮ ಮಕ್ಕಳಿಗೆ ಅನ್ಯಾಯ ಎಸಗಿದಂತಾಗಿದೆ. ರಾಜ್ಯದ ರಾಜ್ಯ ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ತಾರತಮ್ಯ ಉಂಟಾಗುತ್ತಿರುವುದನ್ನು ಗಮನದಲ್ಲಿಟ್ಟು ತಕ್ಷಣ ಸರ್ಕಾರ, ಶಿಕ್ಷಣ ಇಲಾಖೆ, ಪರೀಕ್ಷಾ ಮಂಡಳಿ ಜೊತೆಗೆ ತಜ್ಞರ ಒಳಗೊಂಡಂತೆ ಹಾಗೂ ಕರ್ನಾಟಕ ಶಾಲಾ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಅಗತ್ಯ ಕ್ರಮ ಕೈಗೊಂಡು, ಪಠ್ಯ ಪುಸ್ತಕ NCF & NCERT ಶಿಫಾರಸ್ಸಿನಂತೆ ಕೇಂದ್ರೀಯ ಪಠ್ಯ ಕ್ರಮದ ಮಾದರಿಯಲ್ಲಿ ಗಣಿತ ಮತ್ತು ವಿಜ್ಞಾನವನ್ನು ಮೇಲ್ದರ್ಜೆಗೆ 1 ರಿಂದ 5ನೇ ತರಗತಿಯ ಪಠ್ಯ ಪುಸ್ತಕ ಪರಿಷ್ಕರಿಸುವುದು ಹಾಗೂ NCERT ಒಂದು ವರದಿ ನೀಡಿರುವುದು ಅದರ ಅನ್ವಯ ರಾಜ್ಯದ ಪಠ್ಯ ಕ್ರಮದ ಸರ್ಕಾರಿ ಹಾಗೂ ಖಾಸಗಿ ಶಿಕ್ಷಣದ ಮಕ್ಕಳಿಗೆ ನ್ಯಾಯ ಒದಗಿಸಿಕೊಡುವ ಕುರಿತು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

**ಉತ್ತರ**

ನಮ್ಮ ರಾಜ್ಯದ ಶಾಲಾ ಶಿಕ್ಷಣ ಸುಭದ್ರ ಗೊಳಿಸಲು ಹಾಗೂ ಗುಣಮಟ್ಟ ಹೆಚ್ಚಿಸಲು ತೆಗೆದುಕೊಂಡಿರುವ ಕ್ರಮಗಳು.

**ಶಿಕ್ಷಣಕ್ಕೆ ಅವಕಾಶ :-**

1. ಪ್ರತಿ ವರ್ಷ ಮೇ ಮಾಹೆಯಲ್ಲಿ ವಿಶೇಷ ದಾಖಲಾತಿ ಆಂದೋಲನ ಮತ್ತು ಜೂನ್ ಮಾಹೆಯಲ್ಲಿ ಸಾಮಾನ್ಯ ದಾಖಲಾತಿ ಆಂದೋಲನದಡಿ ಮನೆ ಮನೆ ಭೇಟಿ, ಕರಪತ್ರ ಹಂಚುವಿಕೆ, ಜಾಥಾ ಮತ್ತು ಮೆರವಣಿಗೆ ಮೂಲಕ ಶಿಕ್ಷಣದ ಅರಿವು ಮೂಡಿಸಲಾಗುತ್ತಿದೆ.

2. ಶಾಲಾ ಮಕ್ಕಳಿಗೆ ಸರ್ಕಾರದ ವತಿಯಿಂದ ಉಚಿತವಾಗಿ ಪಠ್ಯಪುಸ್ತಕ, ಸಮವಸ್ತ್ರ, ಶೂ ಮತ್ತು ಸಾಕ್ಸ್ ಮಧ್ಯಾಹ್ನದ ಉಪಹಾರ ಯೋಜನೆಯಡಿ ಬಿಸಿ ಹಾಲು, ಮೊಟ್ಟೆ / ಬಾಳೆಹಣ್ಣು– ಚಿಕ್ಕಿ ಮತ್ತು ಮಧ್ಯಾಹ್ನದ ಊಟ ಒದಗಿಸಲಾಗುತ್ತಿದೆ

3. ಶಾಲಾ ಲಭ್ಯತೆಯಿಲ್ಲದ ಪ್ರದೇಶಗಳಿಂದ ಸಮೀಪದಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಮಕ್ಕಳಿಗೆ 10 ತಿಂಗಳಿಗೆ ಒಟ್ಟು ರೂ.6000/- ಸಾರಿಗೆ ಮತ್ತು ಬೆಂಗಾವಲು ಭತ್ಯೆಯನ್ನು ನೀಡಲಾಗುತ್ತಿದೆ.

4. ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಕೆ.ಜಿ.ಬಿ.ವಿ ಶಾಲೆಗಳು, ಕೆ.ಜಿ.ಬಿ.ವಿ ವಸತಿ ನಿಲಯಗಳು, ನಿರ್ದಿಷ್ಟ ವರ್ಗದ ಮಕ್ಕಳಿಗೆ ನೇತಾಜಿ ಸುಭಾಷ್ ಚಂದ್ರ ಬೋಸ್ ಆವಾಸಿಯ ಶಾಲೆಗಳನ್ನು ತೆರೆದು ಶಿಕ್ಷಣ ನೀಡಲಾಗುತ್ತಿದೆ

5. ಸುಸಜ್ಜಿತ ಮೂಲಭೂತ ಸೌಕರ್ಯ ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನು ಒಳಗೊಂಡ 74 ಆದರ್ಶ ಶಾಲೆಗಳನ್ನು ತೆರೆದು 6 ರಿಂದ 10ನೇ ತರಗತಿವರೆಗೆ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ನೀಡಲಾಗುತ್ತಿದೆ.

6. ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕದಿಂದ ಪದವಿ ಪೂರ್ವ ಶಿಕ್ಷಣದವರೆಗೆ ಶಿಕ್ಷಣ ನೀಡಲು 308 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ತೆರೆಯಲಾಗಿದ್ದು ಎಲ್ಲಾ ಸೌಲಭ್ಯಗಳನ್ನು ಒದಗಿಸಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಜೊತೆಗೆ ಒಟ್ಟು 3000 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣ ಘಟಕ ತೆರೆದು ಚಿಲಿಪಿಲಿ ಪ್ಲಸ್ ಪಠ್ಯ ವಿಷಯ ಬೋಧಿಸಲಾಗುತ್ತಿದೆ. ಅಗತ್ಯವಿರುವ ಶಿಕ್ಷಕರು ಮತ್ತು ಆಯಾಗಳನ್ನು ನೇಮಕ ಮಾಡಿಕೊಂಡು ಕಾರ್ಯನಿರ್ವಹಿಸಲಾಗುತ್ತಿದೆ.

7. ಆಯ್ದ ಒಟ್ಟು 4196 ಪ್ರಾಥಮಿಕ ಶಾಲೆಗಳಲ್ಲಿ ದ್ವಿ-ಭಾಷಾ ಮಾಧ್ಯಮ ಹಾಗು 600 ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ತರಗತಿಗಳನ್ನು ನಡೆಸಲಾಗುತ್ತಿದೆ.

8. ಆಯ್ದ 275 ಸರ್ಕಾರಿ ಪ್ರೌಢ ಶಾಲೆಗಳಲ್ಲಿ 9 ರಿಂದ 12 ತರಗತಿವರೆಗೆ 6 ಸೆಕ್ಟರ್ (IT, Automobile, Retail, Beauty and wellness, Electronics and Apparels)ಗಳಲ್ಲಿ ವೃತ್ತಿ ಶಿಕ್ಷಣವನ್ನು ನೀಡಲಾಗುತ್ತಿದೆ. 2025-26ನೇ ಸಾಲಿನಲ್ಲಿ ಪಿ.ಎ.ಬಿ ಯಿಂದ ಅನುಮೋದನೆಗೊಂಡಿರುವ ಉಳಿಕೆ 300 ಪ್ರೌಢಶಾಲೆಗಳಿಗೆ ವೃತ್ತಿ ಶಿಕ್ಷಣವನ್ನು ವಿಸ್ತರಿಸಲಾಗುವುದು.

9. ಕೇಂದ್ರ ಪುರಸ್ಕೃತ ಯೋಜನೆಯಡಿ ಕರ್ನಾಟಕ ರಾಜ್ಯಕ್ಕೆ ಒಟ್ಟು 2022-23ನೇ ಸಾಲಿನಿಂದ 2024-25ನೇ ಸಾಲಿನವರೆಗೆ 04 ಹಂತದಲ್ಲಿ ಒಟ್ಟು 477 PMSHRI ಶಾಲೆಗಳು ಅನುಮೋದನೆಯಾಗಿದ್ದು 2023-24ನೇ ಸಾಲಿನಲ್ಲಿ 129 ಹಾಗೂ 2024-25ನೇ ಸಾಲಿನಲ್ಲಿ ಉಳಿದ ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ. ಈ ಶಾಲೆಗಳಿಗೆ ಎಲ್ಲಾ ಸೌಲಭ್ಯಗಳನ್ನು ನೀಡಿ ಮಾದರಿ ಶಾಲೆಗಳನ್ನಾಗಿಸಲು ಕ್ರಮವಹಿಸಲಾಗಿದೆ.

10. ಪ್ರಸ್ತುತ ರಾಜ್ಯ ಪಠ್ಯ ಕ್ರಮದ 6 ರಿಂದ 10 ನೇ ತರಗತಿಗಳಿಗೆ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ CBSE ಪಠ್ಯ ಕ್ರಮವನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ.

## 2. ಶಿಕ್ಷಕರ ವೃತ್ತಿದಕ್ಷತೆ ಹೆಚ್ಚಿಸಲು ಅಗತ್ಯ ತರಬೇತಿ

1. ಗುಣಮಟ್ಟದ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ನೀಡುವ ಉದ್ದೇಶದಿಂದ 2022-23 ಹಾಗೂ 2023-24 ನೇ ಸಾಲಿನಲ್ಲಿ ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿಯನ್ನು ಮಾಡಲಾಗಿದೆ. ಹೊಸದಾಗಿ ನೇಮಕಗೊಂಡಿರುವ ಶಿಕ್ಷಕರಿಗೆ 10 ದಿನಗಳ ಬುನಾದಿ ತರಬೇತಿಯನ್ನು (ಇಂಡಕ್ಷನ್ ತರಬೇತಿಯನ್ನು) ನೀಡಲಾಗುತ್ತಿದೆ.
2. ಉತ್ತಮ ಗುಣಮಟ್ಟದ ಶಿಕ್ಷಣವನ್ನು ಮಕ್ಕಳಿಗೆ ಒದಗಿಸಲು ಶಿಕ್ಷಕರಿಗೆ ವೃತ್ತಿಪರ ಬೆಳವಣಿಗೆಯ ತರಬೇತಿಗಳನ್ನು ಪ್ರತಿವರ್ಷ ನೀಡಲಾಗುತ್ತಿದೆ. ನಿಷ್ಠಾ ಆನ್‌ಲೈನ್ ತರಬೇತಿ, ಗುರು ಚೇತನ ಮಾಡ್ಯೂಲ್‌ಗಳ ತರಬೇತಿ, ವಿಷಯವಾರು ಆನ್‌ಲೈನ್ ಮಾಡ್ಯೂಲ್‌ಗಳ ತರಬೇತಿ, ಪ್ರೌಢಶಾಲಾ ಶಿಕ್ಷಕರಿಗೆ ಗಣಿತ ಮತ್ತು ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಐಐಎಸ್‌ಸಿ ಚಳ್ಳಕೆರೆಯಲ್ಲಿ ತರಬೇತಿ ಹಾಗೂ ಇನ್ನಿತರ ತರಬೇತಿಗಳನ್ನು ಶಿಕ್ಷಕರಿಗೆ ನೀಡಲಾಗಿದೆ.
3. 2024-25ನೇ ಸಾಲಿನಲ್ಲಿ ಮರುಸಿಂಚನ (6 ರಿಂದ 10ನೇ ತರಗತಿಗೆ ತರಬೇತಿ, ಗಣಿತ ಗಣಕ ತರಬೇತಿ, ನಲಿಕಲಿ ತರಬೇತಿ, ವಿಷಯವಾರು ತರಬೇತಿ ಹಾಗೂ ಐಐಎಸ್‌ಇ ತರಬೇತಿ, ಸೇವಾ ನಿರತ ಶಿಕ್ಷಕರಿಗೆ Learning Outcome based achievement survey-tool preparation & workshop ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ನೀಡುತ್ತಿದ್ದು, ಇವು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಮುಖಾಂತರ ವಿದ್ಯಾರ್ಥಿಗಳಿಗೆ ತಲುಪುತ್ತಿದೆ. ಇದು ಗುಣಮಟ್ಟದ ಶಿಕ್ಷಣ ಹೆಚ್ಚಳಕ್ಕೆ ಸಹಾಯ ಮಾಡುತ್ತಿದೆ. ಗುಣಮಟ್ಟದ ಶಿಕ್ಷಣವನ್ನು ಒದಗಿಸುವಲ್ಲಿ ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಬೋಧಿಸುತ್ತಿರುವ ಶಿಕ್ಷಕರಿಗೆ (ECCE)ತರಬೇತಿಯನ್ನು ನೀಡಲಾಗಿದೆ.
4. 2019-20ನೇ ಸಾಲಿನಿಂದ ರಾಜ್ಯ ಸರ್ಕಾರವು ಉತ್ತಮ ಗುಣಮಟ್ಟದ ಶಿಕ್ಷಣವನ್ನು ಹಾಗೂ ದಾಖಲಾತಿ ಪ್ರಮಾಣವನ್ನು ಹೆಚ್ಚಿಸುವ ಸದುದ್ದೇಶದಿಂದ ಪ್ರಾಥಮಿಕ ಶಾಲೆಗಳಲ್ಲಿ ಹಾಲಿ ನಡೆಯುತ್ತಿರುವ ಕನ್ನಡ /ಇತರೆ ಮಾಧ್ಯಮದ ಜೊತೆಗೆ ಹೊಸದಾಗಿ ಆಂಗ್ಲ ದ್ವಿ ಭಾಷಾ ಮಾಧ್ಯಮ(Bilingual) ತರಗತಿಗಳನ್ನು ಪ್ರಾರಂಭಿಸಿದೆ. ಒಟ್ಟು ರಾಜ್ಯದಲ್ಲಿ 4129 ಆಂಗ್ಲ ಮಾಧ್ಯಮ ದ್ವಿಭಾಷಾ ಶಾಲೆಗಳನ್ನುಆರಂಭಿಸಲಾಗಿದೆ. ಪ್ರತಿ ವರ್ಷ ಸದರಿ ಶಾಲೆಗಳಲ್ಲಿ EMTIP (English Medium Teachers Induction Programme) 8 ದಿನಗಳತರಬೇತಿಯನ್ನುನೀಡಲಾಗುತ್ತಿದೆ.
5. ಮಕ್ಕಳ ಗುಣಮಟ್ಟದ ಶಿಕ್ಷಣಕ್ಕಾಗಿ e-content creation ಮಾಡಲು ಶಿಕ್ಷಕರಿಗೆ ತರಬೇತಿ ನೀಡಿ ಅವರ ಮೂಲಕ e-content creation ಮಾಡಲು ಕ್ರಮವಹಿಸಲಾಗುತ್ತಿದೆ.
6. ಪ್ರೌಢಶಾಲೆಗಳಲ್ಲಿ ತಂತ್ರಜ್ಞಾನ ಆಧಾರಿತ(TALP) ಕಲಿಕೆಗಾಗಿ ಎಲ್ಲಾ ಶಿಕ್ಷಕರಿಗೆ ತರಬೇತಿ ನೀಡಿ ಮಕ್ಕಳ ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ.
7. ಅಟಲ್ ಟಿಂಕರಿಂಗ್ ಲ್ಯಾಬ್(ATL) ಶಾಲೆಗಳಲ್ಲಿ ಚಟುವಟಿಕೆ ಆಧಾರಿತ ಮತ್ತು ತಂತ್ರಜ್ಞಾನ ಆಧಾರಿತ ಕಲಿಕೆ ನಡೆಸಲಾಗುತ್ತಿದೆ. ಈ ಬಗ್ಗೆ ಶಿಕ್ಷಕರಿಗೆ ತರಬೇತಿ/ ಕಾರ್ಯಾಗಾರಗಳನ್ನು ನಡೆಸಲಾಗುತ್ತಿದೆ.
8. ಹತ್ತನೇ ತರಗತಿಯ ಫಲಿತಾಂಶವನ್ನು ಉತ್ತಮಪಡಿಸಲು ಸುತ್ತೋಲೆಯನ್ನು DSERT ಯಿಂದ ನೀಡಲಾಗಿದೆ ಹಾಗೂ 20 ಅಂಶಗಳ ಕಾರ್ಯಕ್ರಮವನ್ನು ಇಲಾಖೆಯಿಂದ ಜಾರಿಗೊಳಿಸಿ ಪ್ರಗತಿ ಪರಿಶೀಲಿಸಲಾಗುತ್ತಿದೆ.

9. 1 ರಿಂದ 5 ನೇ ತರಗತಿ ಬೋಧಿಸುವ 11234 ಶಿಕ್ಷಕರಿಗೆ Learning outcome based ತರಬೇತಿಯನ್ನು ಆಯೋಜಿಸಲಾಗಿದೆ. ಇದರಿಂದ ತರಗತಿಗಳಲ್ಲಿ ದಾಖಲಾತಿ ಪ್ರಮಾಣ ಮತ್ತು ಶಿಕ್ಷಣ ಗುಣಮಟ್ಟ ಹೆಚ್ಚಾಗಲು ಸಹಕಾರಿಯಾಗಿದೆ.
10. ಇಲಾಖೆಯ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಕಂಪ್ಯೂಟರ್ ತರಬೇತಿ, ಲಿಂಗಾಧಾರಿತ ತರಬೇತಿ, ರಸ್ತೆ ಸುರಕ್ಷತೆ, ಮೌಲ್ಯ ಶಿಕ್ಷಣ ಇತ್ಯಾದಿ ತರಬೇತಿಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.
11. ಶಿಕ್ಷಕರ ಶಿಕ್ಷಣ ಯೋಜನೆಯಡಿ ಪ್ರತಿ ಡಯಟ್‌ಗಳ ಮೂಲಕ ಆಯಾ ಜಿಲ್ಲೆಗಳ ಅಗತ್ಯಕ್ಕನುಗುಣವಾಗಿ ತರಬೇತಿಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

**3 ಗುಣಮಟ್ಟ ಹೆಚ್ಚಿಸಲು ತೆಗೆದುಕೊಂಡಿರುವ ಇತರೆ ಕ್ರಮಗಳು**

1. ತಂತ್ರಜ್ಞಾನ ಬಳಸಿ ಬೋಧನೆ ಮಾಡಲು ಅನುಕೂಲವಾಗುವಂತೆ ಸರ್ಕಾರಿ ಶಾಲೆಗಳಲ್ಲಿ ವಿಶೇಷವಾಗಿ ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ಲ್ಯಾಬ್ ಹಾಗೂ ಸ್ಮಾರ್ಟ್ ಕ್ಲಾಸ್ ಸೌಲಭ್ಯ ಒದಗಿಸಲಾಗುತ್ತಿದೆ.
2. ಗಣಿತ ಕಲಿಕಾ ಆಂದೋಲನ ಕಾರ್ಯಕ್ರಮದಡಿ 4 ಮತ್ತು 5ನೇ ತರಗತಿ ಮಕ್ಕಳು ಸುಲಭವಾಗಿ ಗಣಿತದ ಪರಿಕಲ್ಪನೆಗಳನ್ನು ಅರ್ಥ ಮಾಡಿಕೊಳ್ಳಲು ಗಣಿತ ಕಿಟ್ 1.0 ಮತ್ತು 6 ರಿಂದ 8ನೇ ತರಗತಿಗೆ ಗಣಿತ ಕಿಟ್ 2.0 ನೀಡಿ ಗಣಿತ ಬೋಧನಾ ಕಲಿಕೆ ಸುಗಮಗೊಳಿಸಲು ಕ್ರಮವಹಿಸಿದೆ.
3. 6 ರಿಂದ 8ನೇ ತರಗತಿಗಳ ವಿಜ್ಞಾನ ಬೋಧನೆಯನ್ನು ಸರಳಗೊಳಿಸಲು ಶಾಲೆಗಳಿಗೆ ವಿಜ್ಞಾನ ಕಿಟ್ ಅನ್ನು ಒದಗಿಸಲಾಗಿದೆ.
4. SSLC ಮತ್ತು PUC ಶಿಕ್ಷಣದ ನಂತರ ಕೈಗೊಳ್ಳಬೇಕಾದ ಶಿಕ್ಷಣ ಹಾಗೂ ತೊಡಗಿಸಿಕೊಳ್ಳಬಹುದಾದ ವಿವಿಧ ವೃತ್ತಿಗಳ ಅವಕಾಶ ಸಂಬಂಧ ವೃತ್ತಿ ಮಾರ್ಗದರ್ಶನವನ್ನು ನೀಡಲಾಗುತ್ತಿದೆ.
5. ವಿದ್ಯಾರ್ಥಿಗಳ ಕಲಿಕಾ ಬಲವರ್ಧನೆಗಾಗಿ 2023-24ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯಾದ್ಯಂತ 1 ರಿಂದ 9ನೇ ತರಗತಿಯ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಕಲಿಕೆಯನ್ನು ಬಲವರ್ಧನೆಗೊಳಿಸಲು ಹಾಗು ಕಲಿತ ವಿಷಯಗಳಲ್ಲಿ ಅಭ್ಯಾಸ ಮಾಡಲು ಅನುಕೂಲವಾಗುವಂತೆ ಎಲ್ಲಾ ಮಾಧ್ಯಮ ಮತ್ತು ಭಾಷೆಗಳಲ್ಲಿ ಅಭ್ಯಾಸ ಪುಸ್ತಕಗಳನ್ನು ಮುದ್ರಿಸಿ ವಿತರಿಸಲಾಗಿದೆ.
6. ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸ ಬೆಳೆಸಲು ಹಾಗೂ ಪೂರಕ ಕಲಿಕೆಗೆ ಅಗತ್ಯ ಸಂಪನ್ಮೂಲ ಒದಗಿಸಲು ರಾಜ್ಯದ ಶಾಲೆಗಳಿಗೆ ಪ್ರತಿ ವರ್ಷ ಗ್ರಂಥಾಲಯ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.
7. ವಿದ್ಯಾರ್ಥಿಗಳಲ್ಲಿ ಅವಿಷ್ಕಾರಾತ್ಮಕ ಮನೋಭಾವನೆಯನ್ನು ವೃದ್ಧಿಸುವ ಉದ್ದೇಶದಿಂದ ಹಾಗೂ ಅವರಲ್ಲಿ ಸಮಸ್ಯಾ ಪರಿಹಾರ ಮನೋಭಾವನೆಯನ್ನು ಬೆಳೆಸಲು ಒಟ್ಟು 229 ಪ್ರೌಢಶಾಲೆಗಳಲ್ಲಿ ಅವಿಷ್ಕಾರ ಮತ್ತು ಸೃಷ್ಟಿ ಟಿಂಕರಿಂಗ್ ಲ್ಯಾಬ್‌ಗಳನ್ನು ಸ್ಥಾಪಿಸಲಾಗಿದೆ.
8. 2024-25ನೇ ಸಾಲಿನಲ್ಲಿ 93 ಮಹತ್ವಾಕಾಂಕ್ಷಿ ತಾಲ್ಲೂಕುಗಳಲ್ಲಿ 6 ರಿಂದ 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕಲಿಕಾ ಬಲವರ್ಧನೆಗೊಳಿಸಲು <u>ಮರುಸಿಂಚನ</u> ಕಾರ್ಯಕ್ರಮವನ್ನು ಹಾಗೂ 3 ರಿಂದ 5ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಶಾಲಾವಧಿ ಹೊರತುಪಡಿಸಿ ಪೋಷಕರ ಅನುಕೂಲತೆ ಗಮನಿಸಿ ಗಣಿತ ಕಲಿಕೆಯಲ್ಲಿ

ಹಿಂದುಳಿದಿರುವ ಮಕ್ಕಳಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಕಲಿಕೆ ಉಂಟು ಮಾಡಲು ಗಣಿತ-ಗಣಕ ಹಮ್ಮಿಕೊಂಡು ವಿದ್ಯಾರ್ಥಿಗಳ ಕಲಿಕಾ ಹಿನ್ನಡೆಯನ್ನು ಪರಿಹರಿಸಿ ತರಗತಿಗನುಗುಣವಾದ ಕಲಿಕಾ ಫಲಗಳನ್ನು ಸಾಧಿಸುವಂತೆ ಕ್ರಮವಹಿಸಲಾಗುತ್ತಿದೆ.

9. ಆವಿಷ್ಕೃತ ಚಟುವಟಿಕೆಯಡಿ ಮಕ್ಕಳಲ್ಲಿರುವ ಪ್ರತಿಭೆ, ಕ್ರಿಯಾಶೀಲತೆ ಹಾಗು ಸೃಜನಶೀಲತೆಯನ್ನು ಗುರುತಿಸಿ ಪ್ರೋತ್ಸಾಹಿಸಲು ರಸಪ್ರಶ್ನೆ, ಕಲೋತ್ಸವ, ಕಲಿಕಾ-ಹಬ್ಬಗಳಂತಹ ವಿವಿಧ ಚಟುವಟಿಕೆಗಳನ್ನು ನಿರ್ವಹಿಸಲಾಗುತ್ತಿದೆ.

**ಸಂಖ್ಯೆ: ಇಪಿ 427 ಪಿಜಿಸಿ 2024**

**(ಎಸ್. ಮಧು ಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು